

بسم اللهِ الرّحمٰن الرّحيم

# ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆ – ಬದ್ರ್ ಯುದ್ಧದ ಹಿನ್ನೆಲೆಯಲಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **02–06–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಬದರೀ ಸಹಾಬಿಯರ ಜೀವನಚರಿತ್ರೆ ಮತ್ತು ಅವರ ತ್ಯಾಗಗಳ ಕುರಿತು ನಾನು ಖುತ್ಬಗಳ ಒಂದು ಪರಂಪರೆಯಲ್ಲಿ ಹೇಳುತ್ತಿದ್ದೆ. ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯನ್ನು ವಿವರಿಸದಿದ್ದರೆ, ತೃಷೆ ನೀಗಲಾರದು ಎಂದು ಅನೇಕರು ನನಗೆ ಪತ್ರ ಬರೆದು ತಮ್ಮ ಬಯಕೆಯನ್ನು ವ್ಯಕ್ತಪಡಿಸಿರುವರು. ಏಕೆಂದರೆ ಯಥಾರ್ಥ ಕೇಂದ್ರಬಿಂಧು ಹಝ್ರತ್ ಪೈಗಂಬರ್(ಸ) ಆಗಿದ್ದರು. ಆ ಕೇಂದ್ರಬಿಂಧುವಿನ ಸುತ್ತ ಸಹಾಬಿಯರು ಸುತ್ತುತ್ತಿದ್ದರು. ಅವರೊಂದಿಗೆ ಹೊಂದಿಕೊಂಡು ಸಹಾಬಿಯರು ತ್ಯಾಗಗಳ ಅತುಲ್ಯವಾದ ಮಟ್ಟವನ್ನು ಗಳಿಸಿದರು, ಹೊಸ ಹೊಸ ವಿಧಾನಗಳನ್ನು ಕಲಿತರು ಮತ್ತು ಏಕದೇವ ವಿಶ್ವಾಸವನ್ನು ಹರಡಲು ಮತ್ತು ಸ್ವತಃ ಅದರ ಕರ್ಮಪರವಾದ ಉನ್ನತ ಮಟ್ಟವನ್ನು ನೆಲೆನಿಲ್ಲಿಸಿದರು. ಅದು ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಶಕ್ತಿಗೆ ಮತ್ತು ಅವರು ಅಲ್ಲಾಹನ ವರಿಷ್ಠ ಪ್ರಿಯದಾಸರಾಗಿರುವರು ಎಂಬುದಕ್ಕೆ ಪುರಾವೆಯಾಗಿದೆ. ಆದ್ದರಿಂದ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯನ್ನು ವಿವರಿಸುವುದು ಸಹ ಅಗತ್ಯ.

ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ಅನೇಕ ಮಗ್ಗಲುಗಳ ಕುರಿತು ಕಳೆದ ವರ್ಷಗಳಲ್ಲಿ ಖುತ್ಬಗಳನ್ನು ನೀಡಲಾಗಿವೆ. ಆದರೆ ಹಝ್ರತ್ ಪೈಗಂಬರ್(ಸ) ಜೀವನಚರಿತ್ರೆಗೆ ಒಂದು ಪರಿಮಿತಿಯನ್ನು ಹಾಕಲು ಸಾಧ್ಯವಲ್ಲ. ಪ್ರತಿಯೊಂದು ಗುಣ ಎಂತಹದ್ದು ಎಂದರೆ, ಅದನ್ನು ಅನೇಕ ಖುತ್ಬಗಳಲ್ಲೂ ಪೂರ್ಣಗೊಳಿಸಲು ಸಾಧ್ಯವಲ್ಲ. ಈ ಜೀವನಚರಿತ್ರೆಯನ್ನು ವಿವಿಧ ಸಮಯಗಳಲ್ಲಿ ವಿವರಿಸಲಾಗುವುದು – ಇನ್‌ಶಾ ಅಲ್ಲಾಹ್. ಸತ್ಯದಲ್ಲಿ, ಪ್ರತಿಯೊಂದು ಖುತ್ಬ ಮತ್ತು ಭಾಷಣಗಳಲ್ಲಿ ಅದರ ಯಾವುದಾದರೂ ಅಂಶ ಯಾವುದಾದರೂ ರೀತಿಯಲ್ಲಿ ವಿವರಿಸಲಾಗುತ್ತದೆ. ಏಕೆಂದರೆ ಇದೇ ನಮ್ಮ ಜೀವಿತದ ಕೇಂದ್ರಬಿಂಧುವಾಗಿದೆ. ಅದಿಲ್ಲದೆ ನಮ್ಮ ದೀನ್ ಮತ್ತು ನಮ್ಮ ವಿಶ್ವಾಸ ಪೂರ್ಣಗೊಳ್ಳದು. ಅದಿಲ್ಲದೆ ಅಲ್ಲಾಹನು ಕಳುಹಿಸಿದ ಶರೀಅತಿನಂತೆ ನಡೆಯಲು ಸಾಧ್ಯವೂ ಅಲ್ಲ. ಹೇಗಿದ್ದರೂ ಈಗ ನಾನು ಬದ್ರ್ ಯುದ್ಧಕ್ಕೆ ಸಂಬಂಧಪಟ್ಟು ಹಝ್ರತ್ ಪೈಗಂಬರ್(ಸ)ರ ಜೀವಿತ ಮತ್ತು ಚರಿತ್ರೆಯ ಘಟನೆಗಳನ್ನು ವಿವರಿಸುವೆನು. ಈ ಪರಂಪರೆ ಮುಂದಿನ ಕೆಲವು ಖುತ್ಬಗಳಲ್ಲಿ ಮುಂದುವರೆಯುವುದು.

ಹಝ್ರತ್ ಪೈಗಂಬರ್(ಸ)ರ ಮಾದರಿಯೇ ಸಹಾಬಿಯರಿಗೆ ನಿಸ್ವಾರ್ಥ ತ್ಯಾಗಗಳನ್ನು ಮಾಡುವ ಆವೇಶವನ್ನು ದಯಪಾಲಿಸಿತ್ತು. ಈ ಆವೇಶವನ್ನು ದಯಪಾಲಿಸಿಕೊಂಡು ಸಹಾಬಿಯರನ್ನು ಯೋಧರು, ಶಹೀದರು, ಅಲ್ಲಾಹನ ಪ್ರಿಯರು ಮತ್ತು ಅಲ್ಲಾಹನ ಸಂಪ್ರೀತರನ್ನಾಗಿ ಮಾಡಿದರು. ಅದರ ಮಾದರಿಗಳನ್ನು ನಾವು ನಮ್ಮ ಜೀವಿತಗಳಲ್ಲಿ ನೋಡಿದೆವು. ಆದ್ದರಿಂದ ಈ ಯುದ್ಧಕ್ಕೆ ಸಂಬಂಧಪಟ್ಟು ಕೂಡ ಹಝ್ರತ್ ಪೈಗಂಬರ್(ಸ)ರ ಮಾದರಿಗಳನ್ನು ವಿವರಿಸುವುದು ಅಗತ್ಯ. ಯುದ್ಧದ ಘಟನೆಗಳಿಗೆ ಮುಂಚಿತವಾಗಿ ಯುದ್ಧ ನಡೆಯುವುದಕ್ಕೆ ಕಾರಣವಾದ ಸಂಗತಿಗಳನ್ನು ವಿವರಿಸುವುದು ಅವಶ್ಯ. ಆದ್ದರಿಂದ ನಾನು ಮೊದಲು ಯುದ್ಧದ ಹಿನ್ನೆಲೆಯನ್ನು ವಿವರಿಸುವೆನು. ಈ ಹಿನ್ನೆಲೆಯಲ್ಲೂ ಹಝ್ರತ್ ಪೈಗಂಬರ್(ಸ)ರ ಸ್ವಭಾವ ಮತ್ತು ಅವರು ತಂದ ಸುಂದರವಾದ ಅಧ್ಯಾಪನೆಯ ವಿವಿಧ ಮಗ್ಗುಲುಗಳು ಪ್ರಕಟಗೊಳ್ಳುತ್ತವೆ.

ಬದ್ರ್ ಯುದ್ಧದ ಕಾರಣಗಳನ್ನು ವಿವರಿಸುತ್ತಾ **ಸೀರತ್ ಖಾತಮುನ್ನಬಿಯ್ಯೀನ್**‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ:

ಇಸ್ಲಾಂ ಮತ್ತು ಮುಸ್ಲಿಮರ ವಿರುದ್ಧ ಖುರೈಶಿಗಳು ತೋರಿಸಿದ ವರ್ತನೆ ಮತ್ತು ಮಾಡಿದ ಯೋಜನೆಗಳು ಪ್ರತಿಯೊಂದು ಕಾಲದಲ್ಲಿ ಪ್ರತಿಯೊಂದು ಸ್ಥಿತಿಗಳಲ್ಲಿ ನೋಡಿದರೂ ಎರಡು ಸಮುದಾಯಗಳ ನಡುವೆ ಯುದ್ಧ ನಡೆಯುವಂತಾಗಲು ಸಾಕಾದ ಕಾರಣಗಳಾಗಿದ್ದವು. ಚುಚ್ಚುಮಾತುಗಳು ಮತ್ತು ಅವಮಾನಿಸುವ ವರ್ತನೆಗಳೊಂದಿಗೆ ಮುಸ್ಲಿಮರನ್ನು ಏಕದೇವನ ಆರಾಧನೆ ಮತ್ತು ಏಕದೇವ ವಿಶ್ವಾಸವನ್ನು ಹೇಳುವುದರಿಂದ ಒತ್ತಾಯಪೂರ್ವಕವಾಗಿ ಸತ್ಯನಿಷೇಧಿಗಳು ತಡೆದರು. ಅವರ ಮೇಲೆ ಹಲ್ಲೆ ನಡೆಸಿದರು, ಅವರ ಸಂಪತ್ತನ್ನು ಅನ್ಯಾಯವಾಗಿ ಕಸಿದುಕೊಂಡರು. ಅವರಲ್ಲಿ ಕೆಲವರನ್ನು ಕೊಂದು ಹಾಕಿದರು. ಅವರ ಮಹಿಳೆಯರನ್ನು ಅಪಮಾನಿಸಿದರು. ಕೆಲವು ಮುಸ್ಲಿಮರು ಅಬಿಸೀನಿಯದ ಕಡೆಗೆ ವಲಸೆ ಹೋದಾಗ, ಮುಸ್ಲಿಮರನ್ನು ಮರಳಿ ತರಲಿಕ್ಕಾಗಿ ನಜಾಶಿ ಅರಸನ ಅರಮನೆಯ ತನಕ ಮುಸ್ಲಿಮರನ್ನು ಹಿಂಬಾಲಿಸಿದರು. ಮುಸ್ಲಿಮರ ನೇತಾರರಾದ ಹಝ್ರತ್ ಪೈಗಂಬರ್(ಸ)ರನ್ನು ಎಲ್ಲ ವಿಧದ ಕಷ್ಟತೆಗಳಿಗೆ ಗುರಿಪಡಿಸಿದರು. ತಾಯಿಫಿನಲ್ಲಿ ಅವರ ಮೇಲೆ ಕಲ್ಲುಗಳನ್ನು ವರ್ಷಿಸಿದರು. ಕೊನೆಗೆ ಮಕ್ಕದ ಮುಖಂಡರು ಸಭೆ ಸೇರಿ ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಒಮ್ಮತಾಭಿಪ್ರಾಯದಿಂದ ತೀರ್ಮಾನ ಮಾಡಿದರು. ಈ ಕ್ರೂರ ಒಪ್ಪಂದವನ್ನು ಕಾರ್ಯಗತಗೊಳಿಸಲಿಕ್ಕಾಗಿ ಮಕ್ಕದ ಯುವಕರು ರಾತ್ರಿ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಮನೆಯ ಮೇಲೆ ದಾಳಿ ನಡೆಸಿದರು. ಆದರೆ ಅಲ್ಲಾಹನು ಕೃಪೆದೋರಿದನು ಮತ್ತು ಹಝ್ರತ್ ಪೈಗಂಬರ್(ಸ) ಸುರಕ್ಷಿತರಾದರು ಹಾಗೂ

ಜೀವ ರಕ್ಷಿಸಿಕೊಂಡು ಸೌರ್ ಗುಹೆಯಲ್ಲಿ ಅಭಯ ಪಡೆದುಕೊಂಡರು. ಏನು, ಈ ಎಲ್ಲ ಯೋಜನೆಗಳು ಮತ್ತು ಕ್ರೂರವಾದ ವರ್ತನೆಗಳು ಖುರೈಶಿಗಳ ಕಡೆಯಿಂದ ಯುದ್ಧಕ್ಕಿರುವ ಘೋಷಣೆಯಲ್ಲವೇ? ಖುರೈಶಿಗಳ ಈ ದೌರ್ಜನ್ಯಗಳು ಮುಸ್ಲಿಮರು ಪ್ರತಿರೋಧಕ ಯುದ್ಧವನ್ನು ನಡೆಸಲು ಸಾಕಷ್ಟು ಬುನಾದಿಯನ್ನು ಹಾಕುವುದಿಲ್ಲವೇ? ಖುರೈಶಿಗಳು ಮುಸ್ಲಿಮರಿಗೆ ನೀಡಿದ ಈ ಅಂತಿಮ ಎಚ್ಚರಿಕೆಯನ್ನು ಸ್ವೀಕಾರ ಮಾಡಬಾರದೆಂದು ಲೋಕದ ಯಾವುದೇ ಅಭಿಮಾನಿ ಸಮುದಾಯ ಒಪ್ಪುವುದೇ? ಮುಸ್ಲಿಮರ ಜಾಗದಲ್ಲಿ ಬೇರೆ ಯಾವುದೇ ಸಮುದಾಯವಾಗಿದ್ದರೆ ಖಂಡಿತವಾಗಿಯೂ ಇದಕ್ಕಿಂತ ಬಹಳ ಮುಂಚಿತವಾಗಿಯೇ ಖುರೈಶಿಗಳ ವಿರುದ್ಧ ಹೋರಾಡಲು ಯುದ್ಧ ಮೈದಾನಕ್ಕೆ ಧುಮುಕುತ್ತಿದ್ದರು. ಆದರೆ ಮುಸ್ಲಿಮರಿಗೆ ಅವರ ನಾಯಕರಾದ ಹಝ್ರತ್ ಪೈಗಂಬರ್(ಸ)ರ ಕಡೆಯಿಂದ ಯುದ್ಧ ಮಾಡಲು ಆದೇಶಿಸಲಾಗಿರಲಿಲ್ಲ. ಸತ್ಯನಿಷೇಧಿಗಳ ದೌರ್ಜನ್ಯಗಳ ವಿರುದ್ಧ ಪ್ರತಿಕ್ರಿಯೆ ನಡೆಸಲು ಕೆಲವು ಸಹಾಬಿಯರು ಅನುಮತಿ ಕೇಳಿದಾಗ ಹಝ್ರತ್ ಪೈಗಂಬರ್(ಸ) ನಿರಾಕರಿಸುತ್ತಾ ಕ್ಷಮಿಸಬೇಕೆಂದು ನನಗೆ ಆದೇಶ ನೀಡಲಾಗಿದೆ ಎಂದು ಹೇಳುತ್ತಿದ್ದರು.

ಹೀಗೆ ಸಹನೆ ತೋರಿಸುತ್ತಾ ಒಂದು ದೀರ್ಘಕಾಲ ಕಳೆದುಹೋಯಿತು. ಮುಸ್ಲಿಮರಿಗೆ ಮಕ್ಕವನ್ನು ಬಿಟ್ಟು ಹೋಗಬೇಕಾಗಿ ಬಂತು. ಆಗ ಅಲ್ಲಾಹನು ಮುಸ್ಲಿಮರಿಗೆ ಪ್ರತಿರೋಧಕ ಯುದ್ಧ ನಡೆಸಲು ಅನುಮತಿ ನೀಡಿದನು. ಹಝ್ರತ್ ಪೈಗಂಬರ್(ಸ)ರ ವಲಸೆ ಖುರೈಶಿಗಳ ಅಂತಿಮ ಎಚ್ಚರಿಕೆಯನ್ನು ಸ್ವೀಕಾರ ಮಾಡಿದ್ದನ್ನು ಸೂಚಿಸುತ್ತದೆ. ಅಲ್ಲಾಹನ ಕಡೆಯಿಂದ ಯುದ್ಧ ಘೋಷಣೆಯ ಗೋಪ್ಯವಾದ ಸೂಚನೆ ಅದರಲ್ಲಿ ಇತ್ತು. ಅದನ್ನು ಮುಸ್ಲಿಮರು ಮತ್ತು ಸತ್ಯನಿಷೇಧಿಗಳು ತಿಳಿದುಕೊಂಡಿದ್ದರು. ಆದರೆ ದುರದೃಷ್ಟವಶಾತ್ ದೌರ್ಜನ್ಯಗಾರರಾದ ಖುರೈಶಿಗಳು ಆ ರಹಸ್ಯವಾದ ಸೂಚನೆಯನ್ನು ಮನವರಿಕೆ ಮಾಡಲಿಲ್ಲ. ಇಲ್ಲದಿದ್ದರೆ ಆಗಲಾದರೂ ಸತ್ಯನಿಷೇಧಿಗಳು ಹಿಂದೆ ಸರಿಯುತ್ತಿದ್ದರೆ ಮತ್ತು ಧರ್ಮದ ವಿಷಯದಲ್ಲಿ ಬಲಪ್ರಯೋಗ ನಡೆಸುವುದನ್ನು ನಿಲ್ಲಿಸಿದ್ದರೆ ಹಾಗೂ ಮುಸ್ಲಿಮರಿಗೆ ನೆಮ್ಮದಿಯ ಜೀವನ ಸಾಗಿಸಲು ಅನುವು ಮಾಡಿಕೊಟ್ಟಿದ್ದರೆ, ಖಂಡಿತವಾಗಿಯೂ ಅವರನ್ನು ಆಗಲೂ ಕ್ಷಮಿಸಬಹುದಾಗಿತ್ತು. ಆದರೆ ವಿಧಿಯಂತೆ ನಡೆಯಲೇ ಬೇಕಾಗಿತ್ತು. ಹಝ್ರತ್ ಪೈಗಂಬರ್(ಸ)ರ ಹಿಜ್ರತ್ ಉರಿಯುವ ಬೆಂಕಿಗೆ ಎಣ್ಣೆ ಹಾಕಿದಂತಾಯಿತು.

ಹಝ್ರತ್ ಪೈಗಂಬರ್(ಸ) ಹಿಜ್ರತ್ ಮಾಡಿದಾಗ ಸತ್ಯನಿಷೇಧಿಗಳು ಮಾಡಿದ ಮೊದಲ ಕೆಲಸವೇನೆಂದರೆ, ಅವರು ಹಝ್ರತ್ ಪೈಗಂಬರ್(ಸ)ರನ್ನು ಹಿಂಬಾಲಿಸಲು ಹೊರಟರು. ಅವರು ಸೌರ್ ಗುಹೆಯ ಮುಂಭಾಗದ ತನಕ ತಲುಪಿದರು. ಅಲ್ಲಾಹನು ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ವಿಶೇಷವಾದ ನೆರವು ನೀಡಿದನು ಮತ್ತು ಖುರೈಶಿಗಳ ಕಣ್ಣುಗಳಲ್ಲಿ ಮರೆ ಉಂಟುಮಾಡಿದನು. ಖುರೈಶಿಗಳು ಅಷ್ಟಕ್ಕೆ ನಿಲ್ಲಿಸಲಿಲ್ಲ. ಹಝ್ರತ್ ಪೈಗಂಬರ್(ಸ)ರನ್ನು ಹಿಡಿದುಕೊಂಡು ಬರುವವರಿಗೆ ನೂರು ಒಂಟೆಗಳ ಬಹುಮಾನ ನೀಡುವುದಾಗಿ ಘೋಷಿಸಿದರು. ಹೀಗೆ ಇಪ್ಪತ್ತಕ್ಕೂ ಮೇಲ್ಪಟ್ಟು ಯುವಕರು ಹಝ್ರತ್ ಪೈಗಂಬರ್(ಸ)ರನ್ನು ಹುಡುಕಲು ಹೊರಟರು. ಈ ಯೋಜನೆಯಲ್ಲೂ ಖುರೈಶಿಗಳು ಪರಾಜಿತರಾದರು.

ಅದೇ ರೀತಿಯಲ್ಲಿ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋದಾಗ ಮಕ್ಕಾದ ಖುರೈಶಿಗಳು ಮದೀನದ ಸರದಾರ ಅಬ್ದುಲ್ಲಾಹ್ ಬಿನ್ ಉಬಯ್ಯ್ ಬಿನ್ ಸುಲೂಲ್ ಮತ್ತು ಅವನ ಸಂಗಡಿಗರಿಗೆ ಒಂದು ಬೆದರಿಕೆ ಪತ್ರವನ್ನು ಬರೆದರು: ನೀವು ನಮ್ಮ ಸಂಗಡಿಗನಿಗೆ ಅಭಯ ನೀಡಿರುವಿರಿ. ನಾವು ಅಲ್ಲಾಹನ ಮೇಲೆ ಆಣೆ ಹಾಕಿಕೊಂಡು ಹೇಳುತ್ತೇವೆ. ಒಂದೋ ನೀವು ಅವರ ವಿರುದ್ಧ ಯುದ್ಧ ಮಾಡಿರಿ ಅಥವಾ ಅವರನ್ನು ಊರಿನಿಂದ ಹೊರಗೆ ಹಾಕಿರಿ. ಇಲ್ಲದಿದ್ದರೆ ನಾವೆಲ್ಲರೂ ಒಟ್ಟು ಸೇರಿಕೊಂಡು ನಿಮ್ಮ ಮೇಲೆ ದಾಳಿ ನಡೆಸುವೆವು ಮತ್ತು ನಿಮ್ಮ ಯೋಧರನ್ನು ಕೊಲ್ಲುವೆವು ಹಾಗೂ ನಿಮ್ಮ ಮಹಿಳೆಯರನ್ನು ನಮ್ಮ ಅಧೀನಗೊಳಿಸುವೆವು ಎಂದೆಲ್ಲಾ ಬರೆದರು. ಈ ಪತ್ರವು ಅಬ್ದುಲ್ಲಾಹ್ ಬಿನ್ ಉಬಯ್ ಮತ್ತು ಅವನ ಮೂರ್ತಿ ಪೂಜಕರಾದ ಸಂಗಡಿಗರಿಗೆ ಲಭಿಸಿದಾಗ ಅವರು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಯುದ್ಧ ಮಾಡಲು ಒಟ್ಟು ಸೇರಿಕೊಂಡರು. ಇದರ ಸುದ್ದಿ ಮುಟ್ಟಿದಾಗ ಹಝ್ರತ್ ಪೈಗಂಬರ್(ಸ) ಅವರನ್ನು ಭೇಟಿಯಾದರು ಮತ್ತು ಅವರನ್ನು ಮನವರಿಕೆ ಮಾಡಿಸಿಕೊಂಡು ಅವರನ್ನು ಯುದ್ಧ ಮಾಡುವುದರಿಂದ ತಡೆದರು.

ಇದೇ ರೀತಿಯಲ್ಲಿ ಮಕ್ಕಾದ ಖುರೈಶಿಗಳು ಅರೇಬಿಯದ ಇತರ ಗೋತ್ರಗಳನ್ನು ಸಹ ಮುಸ್ಲಿಮರ ವಿರುದ್ಧ ಪ್ರಚೋದಿಸಿದರು ಮತ್ತು ಯುದ್ಧ ಮಾಡಲು ಪ್ರೇರೇಪಿಸಿದರು. ಇದರ ಪರಿಣಾಮವಾಗಿ ಪೂರ್ತಿ ಅರೇಬಿಯರು ಮದೀನ ನಿವಾಸಿಗಳ ಶತ್ರುಗಳಾದರು. ಮದೀನದ ಸುತ್ತಲೂ ಬೆಂಕಿ ಹೊತ್ತಿದಂತಹ ಸ್ಥಿತಿ ಉಂಟಾಯಿತು.

ಮದೀನದ ಒಳಗಿನ ಸ್ಥಿತಿ ಹೇಗಿತ್ತು ಎಂದರೆ, ಆಗಲೂ ಔಸ್ ಮತ್ತು ಖಝ್ರಜ್ ಗೋತ್ರದಲ್ಲಿ ಒಂದು ದೊಡ್ಡ ಪಾಲು ಜನರು ಬಹುದೇವಾರಾಧನೆಯಲ್ಲೇ ಸ್ಥಿರವಾಗಿದ್ದರು. ಬಾಹ್ಯವಾಗಿ ಅವರು ತಮ್ಮ ಸಹೋದರರ ಮತ್ತು ಬಾಂಧವರ ಜೊತೆಗೆ ಇದ್ದರೂ ಈ ಸ್ಥಿತಿಯಲ್ಲಿ ಮುಶ್ರಿಕರ ಮೇಲೆ ಭರವಸೆ ಇರಿಸಲು ಸಾಧ್ಯವಿರಲಿಲ್ಲ. ಎರಡನೆಯದಾಗಿ ಕಪಟವಿಶ್ವಾಸಿಗಳಿದ್ದರು. ಅವರು ರಹಸ್ಯವಾಗಿ ಇಸ್ಲಾಮಿನ ಶತ್ರುಗಳಾಗಿದ್ದರು. ಮೂರನೆಯದಾಗಿ ಯಹೂದಿಯರಿದ್ದರು. ಅವರೊಂದಿಗೆ ಒಪ್ಪಂದ ನಡೆದಿತ್ತು. ಆದರೂ ಯಹೂದಿಯರು ಒಪ್ಪಂದಕ್ಕೆ ಯಾವುದೇ ಬೆಲೆ ಕೊಡುತ್ತಿರಲಿಲ್ಲ. ಒಟ್ಟಿನಲ್ಲಿ, ಆ ಸಮಯದಲ್ಲಿ ಮದೀನದ ಒಳಗಿನ ವಾತಾವರಣ ಮುಸ್ಲಿಮರ ವಿರುದ್ಧ ಗೋಪ್ಯವಾದ ಒಂದು ಸಿಡಿಮದ್ದಿನ ಸಂಗ್ರಹಕ್ಕಿಂತ ಕಡಿಮೆಯೇನೂ ಆಗಿರಲಿಲ್ಲ. ಅರಬ್ ಗೋತ್ರಗಳ ಅಲ್ಪವಾದ ಬೆಂಕಿಯ ಕಿಡಿಯು ಮದೀನದ ಮುಸ್ಲಿಮರನ್ನು ತಕ್ಷಣವೇ ಉರಿಸಲು ಸಾಕಾಗಿತ್ತು. ಇದಕ್ಕಿಂತ ಅಪಾಯಕಾರಿ ಸಮಯ ಇಸ್ಲಾಮಿನ ಮೇಲೆ ಎಂದಿಗೂ ಬಂದಿರಲಿಲ್ಲ. ಒಟ್ಟಿನಲ್ಲಿ ಅಂತಹ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನ ದಿವ್ಯವಾಣಿ ಅವತೀರ್ಣವಾಯಿತು ಮತ್ತು ಖಡ್ಗದೊಂದಿಗೆ ಯುದ್ಧ ಮಾಡಲಿಕ್ಕಾಗಿ ಆಜ್ಞೆ ಬಂತು. ಖಡ್ಗದೊಂದಿಗೆ ಜಿಹಾದ್ ಮಾಡುವುದರ ಕುರಿತು ಮೊತ್ತಮೊದಲ

ವಚನವು ಹಿಜರೀ 2, ಸಫರ್ 12ರಂದು ಅವತೀರ್ಣವಾಯಿತು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಬಂದು ಸುಮಾರು ಒಂದು ವರ್ಷದ ಕಾಲಾವಧಿ ಕಳೆದಿತ್ತು. ಇದು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರ ವಿವರಣೆಯಾಗಿದೆ. ಕೆಲವರ ಪ್ರಕಾರ ಈ ವಚನ ಹಿಜ್ರತ್ ನಡೆದ ಕೂಡಲೇ ಅವತೀರ್ಣವಾಗಿತ್ತು. ಏಕೆಂದರೆ, ಹಿಜ್ರತ್ ಮಾಡಿದ ಕೂಡಲೇ ಹಝ್ರತ್ ಪೈಗಂಬರ್(ಸ) ಮಕ್ಕಾದ ಸತ್ಯನಿಷೇಧಿಗಳ ಕೆಲವು ಸಂಘಗಳನ್ನು ತಡೆಯಲಿಕ್ಕಾಗಿ ಆಯುಧದಾರಿ ಸಂಘವನ್ನು ಕಳುಹಿಸಿದ್ದರು.

ಮೊದಲ ಬಾರಿ ಖಡ್ಗದೊಂದಿಗೆ ಜಿಹಾದ್ ನಡೆಸಲು ಅನುಮತಿ ನೀಡಿದ ಸೂರಃ ಹಜ್ಜ್‌ನ ಎರಡು ವಚನಗಳು ಹೀಗಿವೆ: "ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ; ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ. 'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು ಅವರು ಎಸಗುವ ದೌರ್ಜನ್ಯಗಳಿಂದ ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸೀದಿಗಳೂ ನಿರ್ನಾಮವಾಗುತ್ತಿದ್ದವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ." ಇಲ್ಲಿ ಪ್ರತಿಯೊಂದು ಧರ್ಮದ ಆರಾಧನಾಲಯಗಳ ಹೆಸರು ಎತ್ತಿಕೊಂಡು ಅವುಗಳ ಸಂರಕ್ಷಣೆಯ ಮಾತನ್ನು ಹೇಳಲಾಗಿದೆ.

ಜಿಹಾದ್ ಕಡ್ಡಾಯಗೊಂಡ ನಂತರ, ಸತ್ಯನಿಷೇಧಿಗಳ ತೊಂದರೆಗಳಿಂದ ಮುಸ್ಲಿಮರನ್ನು ಸಂರಕ್ಷಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಆರಂಭದಲ್ಲಿ ನಾಲ್ಕು ಯೋಜನೆಗಳನ್ನು ಮಾಡಿದರು. ಮೊದಲನೆಯದಾಗಿ, ಹಝ್ರತ್ ಪೈಗಂಬರ್(ಸ) ಸ್ವತಃ ಯಾತ್ರೆ ಮಾಡಿಕೊಂಡು ಮದೀನದ ಆಸುಪಾಸಿನ ಸಮುದಾಯಗಳೊಂದಿಗೆ ಒಪ್ಪಂದ ಮಾಡಿಕೊಂಡರು. ಎರಡನೆಯದಾಗಿ, ಸಣ್ಣ ಸಣ್ಣ ದೂತಸಂಘವನ್ನು ಮದೀನದ ಸುತ್ತಮುತ್ತ ಕಳುಹಿಸಲು ಶುರುಮಾಡಿದರು. ಮೂರನೆಯದಾಗಿ, ಈ ಸಂಘಗಳ ರವಾನೆಯಿಂದ ದುರ್ಬಲ ಮುಸ್ಲಿಮರಿಗೆ ಮದೀನಕ್ಕೆ ಬಂದು ಮುಸ್ಲಿಮರನ್ನು ಭೇಟಿಯಾಗಲು ಸಂದರ್ಭ ಒದಗಿ ಬಂತು. ನಾಲ್ಕನೆಯದಾಗಿ ಸತ್ಯನಿಷೇಧಿಗಳ ವ್ಯಾಪಾರ ತಂಡಗಳು ಮಕ್ಕದಿಂದ ಸಿರಿಯದ ಕಡೆಗೆ ಹೋಗುವಾಗಲೂ ಬರುವಾಗಲೂ ಮದೀನದ ಸಮೀಪದಿಂದ ದಾಟಿ ಹೋಗುವುದನ್ನು ತಡೆ ಹಾಕಲು ಹಝ್ರತ್ ಪೈಗಂಬರ್(ಸ) ಆರಂಭಿಸಿದರು.

(ಈ ಪರಂಪರೆ ಮುಂದುವರೆಯುವುದು ಎಂದು ಹೇಳಿದ ನಂತರ ಹುಝೂರ್ ನಾಲ್ವರು ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ ನಮಾಝ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ وَنَشْهَدُ اَنْ لَّا اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَاءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***
*At, **'Masjid Mubarak',** Islamabad, Tilford, UK. On 02-06-2023*
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon